ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ಇರುವ ಮಾಹಿತಿ ಪ್ರಕಾರ 69 ಕೈಗಾರಿಕೆಗಳು ಅಲ್ಲಿ ಇವೆ. 12 ಬೋರ್‌ವೆಲ್‌ಗಳಿವೆ, ಈಗಾಗಲೇ 8 ಬೋರ್‌ವೆಲ್‌ಗಳು ಕೆಲಸ ಮಾಡುತ್ತಿವೆ. ನಾವು ಪ್ರತಿ ದಿನ 52 ಕಿ.ಲೀಟರ್ ನೀರು ಕೊಡುತ್ತಿದ್ದೇವೆ. ಆದರೆ ಸದಸ್ಯರು ಏನು ಹೇಳುತ್ತಿದ್ದಾರೆ, ಅಲ್ಲಿ ನಮ್ಮ ಭದ್ರಾ ನದಿಯಿಂದ ವಾಟರ್ ಸಪ್ಲೈ ಸ್ಕೀಮ್ ಮಾಡಿ ನೀರು ಸಪ್ಲೈ ಮಾಡುವುದು ಒಳ್ಳೆಯ ಸಲಹೆ, ಈಗಾಗಲೇ ಅದು ಕೆಐಡಿಬಿ ಪರಿಗಣಿಸುತ್ತಿದೆ, ಆದಷ್ಟು ಬೇಗ ಈ ಸ್ಕೀಮ್ ಇಂಪ್ಲಿಮೆಂಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇದರ ಅಂದಾಜುವೆಚ್ಚ ಆರು ಕೋಟಿ ರೂಪಾಯಿಯಾಗುತ್ತದೆ. ಅಲ್ಲಿ ಪುನಃ ಕೈಗಾರಿಕೆ ಬೆಳೆಯುವುದಕ್ಕೆ ಸಾಕಷ್ಟು ಅವಕಾಶ ಇದೆ. ಎರಡನೇ ಹಂತದಲ್ಲಿ 400 ಎಕರೆ ಭೂಮಿ ಅಕ್ವೈರ್ ಮಾಡಬೇಕೆಂದು ಕೆಐಡಿಬಿಯಲ್ಲಿ ಪ್ರಸ್ತಾವನೆ ಇದೆ.

ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ : ಬೋರ್‌ವೆಲ್ ನೀರಿನಲ್ಲಿ ಇಂಡಸ್ಟ್ರೀ ಮಾಡುವುದಕ್ಕಾಗುವುದಿಲ್ಲ. ದಯವಿಟ್ಟು ಇದನ್ನು ಆದಷ್ಟು ಬೇಗ ಮಾಡಿಕೊಡಬೇಕು.

ಶ್ರೀ ಆರ್.ವಿ. ದೇಶಪಾಂಡೆ : ನಾವು ಸ್ಕೀಮ್ ರೆಡಿ ಮಾಡಿದ್ದೇವೆಂದು ಹೇಳಿದ್ದೇನೆ.

ರಾಜ್ಯದಲ್ಲಿ ಕೈಗಾರಿಕೆಗಳಿಲ್ಲದ ಪ್ರದೇಶಗಳ ಬಗ್ಗೆ

515 - ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಕೈಗಾರಿಕೆಗಳು ಇಲ್ಲದ ಪ್ರದೇಶಗಳು ಯಾವುವು? (ಜಿಲ್ಲಾವಾರು ಮಾಹಿತಿ ನೀಡುವುದು)*

ಆ) *ಕೈಗಾರಿಕೆ ಇಲ್ಲದ ಪ್ರದೇಶಗಳಲ್ಲಿ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಿ, ಆ ಪ್ರದೇಶಗಳ ಅಭಿವೃದ್ಧಿಗೆ ಸರ್ಕಾರ ಉದ್ದೇಶಿಸಿದೆಯೇ, ಇದರ ರೂಪುರೇಷೆಗಳೇನು?*

ಇ) *ಕಳೆದ 3 ವರ್ಷಗಳಲ್ಲಿ ಇದಕ್ಕಾಗಿ ಮೀಸಲಿಟ್ಟ ಹಣ ಎಷ್ಟು ಮತ್ತು ಅಭಿವೃದ್ಧಿಗಾಗಿ ಖರ್ಚು ಮಾಡಲಾದ ಹಣ ಎಷ್ಟು?*

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲಾಗಿದೆ.

ಆ) ಎಲ್ಲಾ ಜಿಲ್ಲೆಗಳಲ್ಲಿ ಬಾಕಿ ಉಳಿದ ಕೈಗಾರಿಕಾಭಿವೃದ್ಧಿಗಾಗಿ ಸರ್ಕಾರವು ನಿಯತವಾಗಿ ಕೈಗಾರಿಕಾ ನೀತಿಗಳನ್ನು ಪ್ರಕಟಿಸುತ್ತಿದೆ.

ಇ) ಜಿಲ್ಲಾವಾರು ರಾಜ್ಯ ಸಹಾಯಧನ ಬಿಡುಗಡೆ ಮಾಡಿರುವ ಪಟ್ಟಿ ಲಗತ್ತಿಸಲಾಗಿದೆ.

ANNEXURE

Details of amount released to the Districts during the year 1997-98, 1998-99 and 1999-2000

Sl. No.	Name of the Districts	Amount (In Rs.)
1	2	3
1.	Bangalore (Urban)	1,30,06,745.00
2.	Bangalore (Rural)	3,59,000.00
3.	Bellary	5,27,500.00
4.	Bidar	3,07,500.00
5.	Bijapur	3,53,500.00
6.	Belgaum	7,96,000.00
7.	Bagalkote	3,83,000.00
8.	Chitradurga	6,34,000.00
9.	Chickmagalur	3,04,500.00
10.	Chamarajnagar	6,09,000.00
11.	Dharwad	9,15,000.00
12.	Davanagere	3,76,000.00
13.	Mangalore	4,35,500.00
14.	Karwar	5,81,500.00
15.	Shimoga	4,42,000.00
16.	Mysore	7,35,000.00
17.	Gulbarga	6,78,000.00
18.	Hassan	4,61,000.00
19.	Kolar	6,21,000.00
20.	Kodagu	2,30,000.00
21.	Mandya	3,04,500.00

1	2	3
22.	Raichur	2,25,000.00
23.	Tumkur	5,15,755.00
24.	Gadag	4,67,500.00
25.	Haveri	6,84,500.00
26.	Udupi	3,50,500.00
27.	Koppal	3,67,500.00

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ನಾನು ಪ್ರಶ್ನೆ ಕೇಳಿದ ಉದ್ದೇಶ ಮಾನ್ಯ ಸಚಿವರಿಗೆ ಹ್ಞಾಗೂ ಸರ್ಕಾರಕ್ಕೆ ಅರ್ಥವಾಗಿದೆ ಎಂದು ಭಾವಿಸಿಕೊಂಡಿದ್ದೇನೆ. ಇದರಲ್ಲಿ ಅನೇಕ ಜಿಲ್ಲೆಗಳಿಗೆ ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೆ ಮತ್ತು ಅಲ್ಲಿಯ ನಿರುದ್ಯೋಗಿಗಳಿಗೆ, ಅಲ್ಲಿರುವಂತಹ ಬಂಡವಾಳಗಾರರಿಗೆ ಸದ್ವಿನಿಯೋಗ ಆಗುವುದಕ್ಕೆ ಅವಕಾಶ ಇಲ್ಲದೆ ಇರುವುದು ನಮ್ಮ ಗಮನಕ್ಕೆ ಬಂದಿದೆ, ಹಾಗೂ ಸರ್ಕಾರದ ಗಮನಕ್ಕೆ ಬಂದಿದೆ. ವಿಶೇಷವಾಗಿ ಕೊಪ್ಪಳ, ರಾಯಚೂರು, ಗದಗ, ಬಾಗಲಕೋಟೆ, ಚಿತ್ರದುರ್ಗ, ಹಾವೇರಿ, ಇತ್ಯಾದಿ ಅನೇಕ ಜಿಲ್ಲೆಗಳಲ್ಲಿ ಪೊಟೆನ್ಷಿಯಾಲಿಟಿ ಇದೆ. ಆದರೆ ಸರ್ಕಾರದ ಆದ್ಯತೆ ಇಲ್ಲದೆ ಇರುವುದರಿಂದ ಕೈಗಾರಿಕೆ ಸ್ಥಾಪಿಸುವುದಕ್ಕೆ ಕೊರತೆಯಾಗಿದೆ ಎನ್ನುವುದು ಗಮನಕ್ಕೆ ಬರಬೇಕು. ಈ ಜಿಲ್ಲೆಗಳಲ್ಲಿ ಹೆಚ್ಚಿನ ಕೈಗಾರಿಕೆಗಳನ್ನು ಹೊಂದಿದ ಜಿಲ್ಲೆಗಳಲ್ಲಿ ಮಾತ್ರ ಅಲ್ಲ, ಅನೇಕ ಜಿಲ್ಲೆಗಳು ಕೈಗಾರಿಕೆಗಳಿಂದ ವಂಚಿತವಾಗಿವೆ, ಅದಕ್ಕೆ ಆದ್ಯತೆ ಸಿಗುತ್ತಿಲ್ಲ. ಅದಕ್ಕೆ ಆದ್ಯತೆ ಕೊಡುವುದಕ್ಕೆ ವಿಶೇಷವಾದ ಕ್ರಮ ತೆಗೆದುಕೊಳ್ಳಬೇಕು. ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂದು ಹೇಳಬೇಕು.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಮುಖ್ಯವಾಗಿ ಸರ್ಕಾರದಿಂದ ಯಾವ ಕೈಗಾರಿಕೆ ಪ್ರಾರಂಭ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಗೌರವಾನ್ವಿತ ಸದಸ್ಯರು ಹೇಳಿದ ಹಾಗೆ, ಕೊಪ್ಪಳದಲ್ಲಿ ಬರಬೇಕು, ರಾಯಚೂರಿನಲ್ಲಿ ಬರಬೇಕು, ಉತ್ತರ ಕನ್ನಡದಲ್ಲಿ ಬರಬೇಕು, ಬೆಳಗಾವಿಯಲ್ಲಿ ಬರಬೇಕು, ಗುಲ್ಬರ್ಗಾದಲ್ಲಿ ಬರಬೇಕು ಇದು ಸರ್ಕಾರದ ಉದ್ದೇಶ. ಸರ್ಕಾರ ಇವತ್ತು ಮೂಲಭೂತ ಸೌಕರ್ಯಕ್ಕೆ ಹೆಚ್ಚು ಮಹತ್ವ ಕೊಟ್ಟಿದೆ. ರಸ್ತೆಗಳು ಇರಲಿ, ವಿದ್ಯುಚ್ಛಕ್ತಿ ಇರಲಿ, ಎಸ್ಟೇಟ್ ಇರಲಿ, ಅದನ್ನು ಸುಧಾರಿಸಿ ಅಲ್ಲಿ ಮೂಲಭೂತ ಸೌಕರ್ಯ ಕೊಟ್ಟು ಈ ಕೈಗಾರಿಕೆ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಕೆಐಡಿಬಿಯಿಂದ 82 ಇಂಡಸ್ಟ್ರಿಯಲ್ ಎಸ್ಟೇಟ್ ಇವೆ, 27,000 ಎಕರೆ ಜಮೀನು ನಾವು ಈಗಾಗಲೇ ಅಭಿವೃದ್ಧಿ ಮಾಡಿದ್ದೇವೆ. ಪಾಪ್ಯುಲೇಷನ್ ಸಲುವಾಗಿ 25-26,000 ಎಕರೆ ಡೆವಲಪ್ ಆಗಿದೆ. ಕೊಪ್ಪಳದಲ್ಲಿ ಕೆಲವು ಕೈಗಾರಿಕೆಗಳು ಬಂದಿವೆ. ರಾಯಚೂರು, ಬಿಜಾಪುರ ಮತ್ತು ಬಾಗಲಕೋಟೆ ಇಂತಹ ಕೆಲವು ಜಿಲ್ಲೆಗಳಲ್ಲಿ ಕೈಗಾರಿಕೆಗಳು ಯಾವ ಪ್ರಮಾಣದಲ್ಲಿ ಬರಬೇಕು, ಆ ಪ್ರಮಾಣದಲ್ಲಿ ಬರುತ್ತಿಲ್ಲ. ಹಾಗಾಗಿ ಸರ್ಕಾರದ ಕೈಗಾರಿಕಾ ನೀತಿ ಇದೆ, ಫುಡ್ ಪ್ರೋಸೆಸ್ ನೀತಿ ಇದೆ, ಎಲ್ಲ ನೀತಿಗಳು ಸರ್ಕಾರದಲ್ಲಿವೆ. ನಾವು ಕೈಗಾರಿಕೆ ಬರುವುದಕ್ಕೆ ಉತ್ತೇಜನ ಕೊಡುತ್ತಿದ್ದೇವೆ. ಮೊನ್ನೆ ಆದ ಗ್ಲೋಬಲ್

ಇನ್‌ವೆಸ್ಟರ್ಸ್ ಬಿಡ್‌ನಲ್ಲಿ ಸಹ ಹಲವಾರು ಜಿಲ್ಲೆಗಳಲ್ಲಿ ಕೈಗಾರಿಕೆಗಳು ಬಂದಿವೆ. 254 ಪ್ರಾಜೆಕ್ಟ್ಸ್ ನಾವು ಕಂಪ್ಲೀಟ್ ಮಾಡಿದ್ದೇವೆ. 27,000 ಕೋಟಿ ರೂಪಾಯಿಯ ಹಲವಾರು ಕೈಗಾರಿಕೆಗಳು ಬೇರೆ ಬೇರೆ ಜಿಲ್ಲೆಗಳಲ್ಲಿ ಬಂದಿವೆ. ಸರ್ಕಾರದ ಕರ್ತವ್ಯ ಏನೆಂದರೆ, ನಾವು ಫೆಸಿಲಿಟಿ ನೋಡಿ ಮಾಡುತ್ತೇವೆ. ಇಂಡಸ್ಟ್ರೀಸ್ ಪ್ರಮೋಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಯೇ ವಿನಃ ಸರ್ಕಾರ ಇದರ ಮುಂದೆ ಯಾವ ಕೈಗಾರಿಕೆ ಪ್ರಾರಂಭ ಮಾಡುವುದಕ್ಕೆ ಸಾಧ್ಯವಿಲ್ಲ. ನಾವು ಪ್ರಿಯಾರಿಟಿ ನೋಡಿ ಮಾಡಬೇಕಾಗುತ್ತದೆ. That is not the priority before the Government.

12.30 ಪಿ.ಎಂ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಕೈಗಾರಿಕೆಗಳ ಬೆಳವಣಿಗೆ ನಮ್ಮ ರಾಜ್ಯದಲ್ಲಿ ಸರಿಯಾದ ರೀತಿಯಲ್ಲಿ ಆಗದಿರಲು ಕಾರಣ ಮೂಲಭೂತ ಸೌಕರ್ಯಗಳನ್ನು ತುರ್ತಾಗಿ ಒದಗಿಸದಿರುವುದೇ ಕಾರಣವಾಗಿದೆ. ಆದರೆ ಬೆಂಗಳೂರಿನಲ್ಲಿ ತಮಿಳುನಾಡಿನ ಗಡಿಯ ಹೊಸೂರಿನಲ್ಲಿ ಕೈಗಾರಿಕೆಗಳು ಇಂದು ಬೆಳೆಯುತ್ತಿವೆ. ಮೂಲಭೂತ ಸೌಕರ್ಯಗಳು ಸರಿಯಾಗಿ ಸಿಗುವ ಬೇರೆ ಬೇರೆ ರಾಜ್ಯಗಳಲ್ಲಿ ಉದ್ಯಮಿಗಳು ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಹೋಗುತ್ತಿದ್ದಾರೆ. ಆದುದರಿಂದ ನಮ್ಮ ರಾಜ್ಯವು ಇಲ್ಲಿಯೇ ಹೆಚ್ಚು ಕೈಗಾರಿಕೆಗಳು ಬೆಳೆಯಲು ಅನುಕೂಲಕರವಾದ ನಿರಂತರ ವಿದ್ಯುತ್ ಸರಬರಾಜು, ಹಾಗೂ ಇನ್ನಿತರ ಮೂಲಭೂತ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಸರ್ಕಾರವು ಮುಂದಾಗದೇ ಹೋದರೆ ಈಗ ಹಾಲಿ ನಮ್ಮ ರಾಜ್ಯದಲ್ಲಿರುವ ಕೈಗಾರಿಕೆಗಳವರು ಕೂಡ ಬೇರೆ ರಾಜ್ಯಗಳಿಗೆ ಹೋಗುವ ಸ್ಥಿತಿ ಬರುತ್ತದೆ. ಆದುದರಿಂದ ಯಾವುದೋ ಒಂದು ಭ್ರಮೆಯಲ್ಲಿ, ಯಾವುದೋ ಒಂದು ಗಾಳಿಯಲ್ಲಿ ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳು ಬಂದುಬಿಡುತ್ತವೆ ಎನ್ನುವಂಥ ದೃಷ್ಟಿಕೋನದಲ್ಲಿ ಸರ್ಕಾರವಿರದೆ ನಿಜವಾದ, ಅಕ್ಷರಶಃ ಮತ್ತು ವಸ್ತುಶಃ ಯೋಚನೆಯನ್ನು ಮಾಡಿ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಬೇಕೆಂದು ಆಗ್ರಹಪಡಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಸದಸ್ಯರ ಅಭಿಪ್ರಾಯಕ್ಕೆ ಸಂಬಂಧಪಟ್ಟಂತೆ ನಾನು ಈಗಾಗಲೇ ಉತ್ತರ ಕೊಡುವಾಗ ಮುಖ್ಯವಾಗಿ ಕೈಗಾರಿಕೆಗಳು ಬೆಳೆಯಲು ಮೂಲಭೂತ ಸೌಕರ್ಯಗಳು ಬೆಳೆಯಬೇಕು ಎಂದು ಹೇಳಿದೆ. ಇಂದು ತಮಿಳುನಾಡಿನ ಬೌಂಡರಿಯಾದ ಹೊಸೂರನಲ್ಲಿ ಕೈಗಾರಿಕೆಗಳು ಬರಲು ಕಾರಣ ಬೆಂಗಳೂರಿನಲ್ಲಿ ಕೈಗಾರಿಕೆಗಳ ಬೆಳವಣಿಗೆಗೆ ಉತ್ತಮವಾದ ವಾತಾವರಣವಿರುವುದೇ ಆಗಿದೆ. ಅಲ್ಲಿ ಹೆಚ್ಚು ಕೈಗಾರಿಕೆಗಳು ಬರುತ್ತಿರುವುದನ್ನು ಒಪ್ಪಿಕೊಳ್ಳುತ್ತೇವೆ. ನಾವೂ ಕೂಡ ಬೌಂಡರಿಗಳಲ್ಲಿ ಕೈಗಾರಿಕೆಗಳು ಬರಲು ಪ್ರಯತ್ನ ಮಾಡುತ್ತಿದ್ದೇವೆ. ಈಗ ಮೈಸೂರಿನಲ್ಲಿ ಮತ್ತು ನಿಪ್ಪಾಣಿಯಲ್ಲಿ ಕೈಗಾರಿಕೆಗಳನ್ನು ಬೆಳೆಸಲು ಪ್ರಯತ್ನ ಮಾಡುತ್ತಿದ್ದೇವೆ. ಕರ್ನಾಟಕ ರಾಜ್ಯದಲ್ಲಿ ಕೈಗಾರಿಕೆಗಳು ಬೆಳೆಯಲು ಬೇಕಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಪ್ರಯತ್ನ ಮಾಡುತ್ತದೆ. ಹಿಂದೆ ಕೈಗಾರಿಕೆಗಳವರಿಗೆ ಸಬ್ಸಿಡಿ ಕೊಡಲಾಗುತ್ತಿತ್ತು. ಆದರೆ ಕಳೆದ ಒಂದು ವರ್ಷದಿಂದ ಟೈನಿ ಇಂಡಸ್ಟ್ರೀಗಳಿಗೆ ಬಿಟ್ಟು ಬೇರೆ ಯಾವ ಕೈಗಾರಿಕೆಗೂ ಸಬ್ಸಿಡಿಯನ್ನು ಕೊಡುತ್ತಿಲ್ಲ. ಸೆಸ್ ಟ್ಯಾಕ್ಸ್ ವಿನಾಯಿತಿಯನ್ನು ಕೂಡ ಈಗ ಕೇಂದ್ರ ಸರ್ಕಾರದ ನಿರ್ಣಯದಂತೆ ಎಲ್ಲಾ ರಾಜ್ಯಗಳು ಸೆಸ್ ಟ್ಯಾಕ್ಸ್ ವಿನಾಯಿತಿಯನ್ನು ನಿರ್ಬಂಧ ಮಾಡಿವೆ.

ಆದುದರಿಂದ ಇಂದು ನಮ್ಮ ರಾಜ್ಯ ಮೂಲಭೂತ ಸೌಕರ್ಯವನ್ನು ಕೈಗಾರಿಕೆಗಳಿಗೆ ಒದಗಿಸುವುದಕ್ಕೆ ಹೆಚ್ಚಿನ ಮಹತ್ವ ಕೊಟ್ಟು ವಿದ್ಯುತ್ ಸರಬರಾಜಿಗೆ, ನೀರಿನ ಸರಬರಾಜಿಗೆ, ಕೈಗಾರಿಕಾ ಶೆಡ್‌ಗಳನ್ನು ನಿರ್ಮಾಣ ಮಾಡುವುದಕ್ಕೆ ಸರ್ಕಾರ ಪ್ರಾಧಾನ್ಯತೆ ಕೊಟ್ಟು ಪ್ರಯತ್ನ ಮಾಡುತ್ತಿದೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಜಿಲ್ಲಾ ಮಟ್ಟದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವ ಸಲುವಾಗಿ ಕೈಗಾರಿಕಾ ಶೆಡ್‌ಗಳನ್ನು ಅಭಿವದ್ಧಿಪಡಿಸಲಾಗುವುದು ಎಂದರು. ಅದೇ ರೀತಿಯಲ್ಲಿ ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲೂ ಕೈಗಾರಿಕಾ ಶೆಡ್‌ಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಪ್ರಯತ್ನ ಮಾಡಲು ನಿರ್ಧಾರ ತೆಗೆದುಕೊಂಡಿದೆಯೇ?

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮಾನ್ಯ ಅಧ್ಯಕ್ಷರೆ, ಇಂದು ನಮ್ಮ ಕೊಪ್ಪಳ ಜಿಲ್ಲೆಯಾಗಿದೆ. ಇಲ್ಲಿ ಕಳೆದ ವರ್ಷದಿಂದ ಕೈಗಾರಿಕೆಗಳಿಗೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತಿದ್ದೇವೆ. ಆದರೆ, ಅದು ಘೋಷಣೆಯಾಗುತ್ತಿಲ್ಲ. ಇಂದು ಕೈಗಾರಿಕೆಗಳು ಹೆಚ್ಚು ಬೆಳೆಯಬೇಕೆಂದು ಒಂದು ಕಡೆ ಹೇಳುತ್ತಿದ್ದೇವೆ. ಆದರೆ ಮೂಲ ಭೂತ ಸೌಕರ್ಯಗಳನ್ನು ಕೊಡದಿದ್ದರೆ ಕೈಗಾರಿಕೆಗಳು ಬೆಳೆಯುವುದಾದರೂ ಹೇಗೆ?

ಶ್ರೀ ಹಂಪನಗೌಡ ಬಾದರ್ಲಿ : ಮಾನ್ಯ ಅಧ್ಯಕ್ಷರೆ, ಸಿಂಧನೂರಿನಲ್ಲೂ ಕೂಡ ಕಳೆದ ಹತ್ತಾರು ವರ್ಷಗಳಿಂದ ಕೈಗಾರಿಕೆಗಳಿಗೆ ಬೇಕಾದ ಮೂಲಭೂತ ಸೌಕರ್ಯಗಳು ಸಿಕ್ಕಿಲ್ಲ. ಅಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಆಗಿರುವ ತೊಂದರೆಯಾದರೂ ಏನು ಎಂಬುದನ್ನು ಸರ್ಕಾರ ಹೇಳಬೇಕು.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಕೆ.ಐ.ಎ.ಡಿ.ಬಿ. ಮತ್ತು ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮಗಳು ಕೈಗಾರಿಕೆಗಳ ಅಭಿವೃದ್ಧಿಯ ಕಾರ್ಯವನ್ನು ಮಾಡುತ್ತಿವೆ. ಎಲ್ಲಾ ತಾಲ್ಲೂಕುಗಳಲ್ಲಿಯೂ ಕೈಗಾರಿಕೆಗಳೂ ಬೆಳೆಯಬೇಕು ಎಂಬುದೇ ಸರ್ಕಾರದ ಉದ್ದೇಶವಾಗಿದೆ. ಈ ಉದ್ದೇಶವಿಟ್ಟುಕೊಂಡು ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ತಾಲ್ಲೂಕುಗಳಲ್ಲಿ ಸಣ್ಣ ಕೈಗಾರಿಕೆಗಳನ್ನು ಪ್ರಾರಂಭ ಮಾಡುತ್ತಿವೆ. ಇದೇ ರೀತಿಯಲ್ಲಿ ಕೆ.ಐ.ಎ.ಡಿ.ಬಿ.ಯದು ಕೂಡ 82 ಶೆಡ್‌ಗಳು ಇವೆ. ಮುಖ್ಯವಾಗಿ ಕೈಗಾರಿಕೆಗಳು ಅಲ್ಲಿ ಆಗಬೇಕಾದರೆ ಅದಕ್ಕೆ ಬೇಕಾದ ಪೊಟೆನಶಿಯಲ್ ಇರಬೇಕು. ಏಕೆಂದರೆ ಅಲ್ಲಿ ನಾವು ಲ್ಯಾಂಡ್ ಖರೀದಿ ಮಾಡಿ ಮೂಲಭೂತ ಸೌಕರ್ಯಗಳಿಗಾಗಿ ಬಹಳಷ್ಟು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಈ ದೃಷ್ಟಿಯಿಂದ ರಾಜ್ಯದ 175 ತಾಲ್ಲೂಕುಗಳಲ್ಲಿ ಯಾವ ಯಾವ ರೀತಿಯ ಕೈಗಾರಿಕೆಗಳನ್ನು ಪ್ರಾರಂಭ ಮಾಡಬಹುದು ಎಂಬುದಕ್ಕೆ ಸಂಬಂಧಪಟ್ಟಂತೆ ಶಾಸ್ತ್ರೀಯವಾಗಿ ಅಧ್ಯಯನ ಮಾಡಿ ಸ್ವತಃ ಇಲಾಖಾ ವತಿಯಿಂದಲೇ ಕನ್ನಡ ಹಾಗೂ ಆಂಗ್ಲ ಭಾಷೆಗಳಲ್ಲಿ ಪುಸ್ತಕವನ್ನು ಮುದ್ರಣ ಮಾಡಿಸಲಾಗುತ್ತಿದೆ. ಎಲ್ಲಾ ಜನರಿಗೂ ಇದರಿಂದ ಯಾವ ಯಾವ ತಾಲ್ಲೂಕಿನಲ್ಲಿ ಯಾವ ಕೈಗಾರಿಕೆಗಳನ್ನು ತೆರೆಯಬಹುದು ಎಂಬ ವಿಷಯ ಗೊತ್ತಾಗುತ್ತದೆ. ಈಗಾಗಲೇ ಕೆಲವು ತಾಲ್ಲೂಕುಗಳಲ್ಲಿ ಆ ಪುಸ್ತಕವನ್ನು ಪಬ್ಲಿಶ್ ಮಾಡಲಾಗಿದೆ. ಯಾವ ಯಾವ ತಾಲ್ಲೂಕುಗಳಲ್ಲಿ ಕೈಗಾರಿಕೆಗಳನ್ನು ತೆರೆಯಲು ಪೊಟೆನ್‌ಶಿಯಲ್ ಇದೆಯೋ ಅಲ್ಲಿ ಕ್ರಮೇಣವಾಗಿ ಕೈಗಾರಿಕೆಗಳನ್ನು ತೆರೆಯಲು ಪ್ರಯತ್ನ ಮಾಡಲಾಗುವುದು.

ಶ್ರೀ ಪಿ.ಹೆಚ್. ಪೂಜಾರ್ : ಅಧ್ಯಕ್ಷರೆ, ಬಾಗಲಕೋಟೆ ಜಿಲ್ಲೆಯಲ್ಲಿ ಸುಮಾರು ಎರಡು ಲಕ್ಷ ಜನರು ತಮ್ಮ ಜಮೀನು ಮುಳುಗಡೆಯಿಂದ ಉದ್ಯೋಗ ಕಳೆದುಕೊಂಡಿದ್ದಾರೆ. ಅಲ್ಲಿ ಕೈಗಾರಿಕೆಗಳ ಮೂಲಭೂತ ಸೌಕರ್ಯ ಒದಗಿಸುವುದರ ಜೊತೆಗೆ ಕೈಗಾರಿಕೆಗಳನ್ನು ತೆರೆಯುವರಿಗೆ ವಿಶೇಷವಾದ ಸವಲತ್ತುಗಳನ್ನು ಕೊಡುವಲ್ಲಿ ಪ್ರಯತ್ನ ಮಾಡಬೇಕು. ಅದರಲ್ಲೂ ತೆರಿಗೆ ವಿನಾಯಿತಿಯಂಥ ಸೌಲಭ್ಯವನ್ನು ಕೊಡುವಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಈಗೇನು ಹೊಸ ಜಿಲ್ಲೆಗಳು ಆಗಿವೆ ಅಲ್ಲಿಯ ಜಿಲ್ಲಾ ಕೇಂದ್ರದಲ್ಲಿ ಕೆ.ಐ.ಎ.ಡಿ.ಬಿ.ಯಿಂದ ಕೈಗಾರಿಕಾ ಶೆಡ್‌ಗಳನ್ನು ಅಭಿವೃದ್ಧಿಪಡಿಸಬೇಕೆಂದು ಈಗಾಗಲೇ ನಿರ್ಣಯ ತೆಗೆದುಕೊಂಡಿದ್ದೇವೆ. ಈಗಾಗಲೇ ಸರ್ವೆ ಮಾಡಿದ್ದೇವೆ. ರಾಯಚೂರಿನಲ್ಲೂ ಕೂಡ ದೊಡ್ಡ ಒಂದು ಪೆಟ್ರೊ ಕೆಮಿಕಲ್ಸ್‌ನ ಪ್ರಾಜೆಕ್ಟ್ ಬಗ್ಗೆ ಕ್ಲಿಯರ್ ಮಾಡಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲು ಈಗಾಗಲೇ ಕೆ.ಐ.ಎ.ಡಿ.ಬಿ.ಗೆ ಆದೇಶ ಕೊಡಲಾಗಿದೆ. ಇನ್ನು ಮಾಲೂರು ಹಾಗೂ ಬಾಗಲಕೋಟೆಯಲ್ಲಿ ಮುಖ್ಯವಾಗಿ ಒಂದು ಫುಡ್ ಪ್ರೋಸಸಿಂಗ್ ಘಟಕವನ್ನು ಮಾಡಬೇಕೆಂದು ಹೇಳಿ, ಕ್ರಮ ತೆಗೆದುಕೊಂಡು ಈಗಾಗಲೇ ಅದಕ್ಕೆ ಬೇಕಾದ ಭೂಮಿಯನ್ನು ಅಕ್ವೈರ್ ಮಾಡಿಕೊಳ್ಳುವುದಕ್ಕೆ ಆದೇಶವನ್ನು ಕೊಟ್ಟಿದ್ದೇವೆ. ಆದರೆ ಕೈಗಾರಿಕಾ ತೆರೆಯುವರಿಗೆ ವಿಶೇಷವಾದ ಉತ್ತೇಜನದ ರಿಯಾಯಿತಿ ಕೊಡುವುದಕ್ಕೆ ಅವಕಾಶವಿಲ್ಲವಾಗಿದೆ. ಎಲ್ಲಾ ರಾಜ್ಯಗಳಿಗೆ ಯಾವ ಇಂಡಸ್ಟ್ರಿಯಲ್ ಪಾಲಿಸಿ ಇದೆಯೋ ಅದನ್ನು ನಾವು ಅನುಸರಿಸಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಇಂದು ಕೈಗಾರಿಕೆಗಳು ಬೆಳೆಯಲು ಬೇಕಾದ ಕೃಷಿ ಉತ್ಪನ್ನಗಳ ಕೈಗಾರಿಕೆಗಳು ಕೂಡ ಬೆಳೆಯಬೇಕಾದ ಅವಶ್ಯಕತೆ ಇದೆ. ಆದರೆ ಇಂದು ಕೃಷಿಗೆ ಮಾರಕವಾದ ಕೈಗಾರಿಕೆಗಳು ಬರುತ್ತಿಲ್ಲ. ಮಾನ್ಯ ಮಂತ್ರಿಗಳು ಎರಡು ಕಡೆಗಳಲ್ಲಿ ಫುಡ್ ಪ್ರೋಸಸಿಂಗ್ ಘಟಕವನ್ನು ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಅಲ್ಲಿ ಎಷ್ಟು ಜನರು ಇನ್‌ವೆಸ್ಟ್ ಮಾಡುವುದಕ್ಕೆ ಬಂದಿದ್ದಾರೆ ಎಂಬುದಕ್ಕೆ ಸಂಬಂಧಪಟ್ಟಂತೆ ಮಾಹಿತಿಯೇನಾದರೂ ಇದೆಯೇ? ಆ ಮಾಹಿತಿ ಇಲ್ಲದೇ ಹೋದರೆ ನೀವು ಇದಕ್ಕೆ ಸಂಬಂಧಪಟ್ಟಂತೆ ಇನ್ನೂ ಹೆಚ್ಚಿನ ಉತ್ತೇಜನ ನೀಡಬೇಕಾದ ಅವಶ್ಯಕತೆ ಇದೆ. ಅದೇ ರೀತಿಯಲ್ಲಿ ಇಂದು ಕೃಷಿ ಉತ್ಪನ್ನಗಳಿಗೆ ಕೋಲ್ಡ್ ಸ್ಟೋರೇಜ್‌ಗಳ ಅವಶ್ಯಕತೆ ಇದೆ. ಇದರ ಬಗ್ಗೆ ಏನು ಕ್ರಮ ತಗೆದುಕೊಳ್ಳಲಾಗಿದೆ ಎಂಬ ಬಗ್ಗೆ ದಯವಿಟ್ಟು ಮಂತ್ರಿಗಳು ತಿಳಿಸಬೇಕು.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಭೈರೇಗೌಡರು ಹೇಳಿದ ಹಾಗೆ ರಾಜ್ಯದಲ್ಲಿ ಯಾವ ಮಟ್ಟದಲ್ಲಿ ಫುಡ್ ಪ್ರೋಸಸಿಂಗ್ ಬೆಳೆಯಬೇಕಾಗಿತ್ತೋ ಆ ಪ್ರಮಾಣದಲ್ಲಿ ಬೆಳೆದಿಲ್ಲವೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ರೈತರಿಗೆ ನಿಜವಾಗಿ ಸಹಾಯವಾಗಬೇಕೆಂದರೆ ಇವು ಬೆಳೆಯಬೇಕಾದ ಅವಶ್ಯಕತೆ ಇದೆ. ಆದಕಾರಣ ಫುಡ್ ಪ್ರೋಸಸಿಂಗ್‌ಗೆ ಪ್ರಾಧಾನ್ಯತೆ ಕೊಟ್ಟು ಮಾಲೂರು ಹಾಗೂ ಬಾಗಲಕೋಟೆಯಲ್ಲಿ ಫುಡ್ ಪ್ರೋಸಸಿಂಗ್ ಘಟಕವನ್ನು ತೆರೆಯಲು ಪ್ರಯತ್ನ ಮಾಡಲಾಗುತ್ತಿದೆ. ಅದೇ ರೀತಿಯಲ್ಲಿ ಬೇರೆ ಕಡೆಗಳಲ್ಲಿ ಡಿಮ್ಯಾಂಡ್ ಎಲ್ಲಿದೆ ಅಲ್ಲಿಯೂ ಕೂಡ ಪ್ರಾರಂಭ ಮಾಡಲು ಪ್ರಯತ್ನ ಮಾಡಲಾಗುವುದು.

ಅಧ್ಯಕ್ಷರು : ಜಗದೀಶ್ ಶೆಟ್ಟರ್‌ರವರೆ, ತಮ್ಮ ಪ್ರಶ್ನೆಯನ್ನು ಕೇಳಿ.